# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | ~~208~~ 203 (244) |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ: | 04-03-2020 |
| ಉತ್ತರಿಸುವವರು | ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸರ್ಕಾರಿ ವೇತನ ಶ್ರೇಣಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ ನೌಕರರಿಗೆ 6ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿಯನ್ನು ಇದುವರೆವಿಗೂ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಇದುವರೆಗೆ ಮಂಜೂರು ಮಾಡುವಲ್ಲಿನ ವಿಳಂಬಕ್ಕೆ ಕಾರಣಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 54 ಮುಸೇವಿ 2017 ದಿನಾಂಕ:06.07.2018ರಲ್ಲಿ ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳನ್ನು ಒಳಗೊಂಡಂತೆ ರಚಿಸಿರುವ ಸಮಿತಿಯು ದಿನಾಂಕ:07.12.2018 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿಒಟ್ಟು 1111 ಮಂದಿ ದೇವಾಲಯದ ನೌಕರರುಗಳು ಈಗಾಗಲೇ ಸಮೂಹ 'ಸಿ' ಮತ್ತು 'ಡಿ' ವೃಂದದ ಸರ್ಕಾರಿ ನೌಕರರಿಗೆ ನೀಡಲಾಗುವ ವೇತನ ಶ್ರೇಣಿಯನ್ನು ಪಡೆದಿರುತ್ತಾರೆ.<br><br>ಆದರೆ ಇನ್ನೂ ವೇತನ ಶ್ರೇಣಿ ನಿಗದಿಪಡಿಸಲು ಬಾಕಿ 2,568 ತಾತ್ಕಾಲಿಕ ನೌಕರರಿದ್ದು, ಇವರಿಗೆ ಅನ್ಯಾಯವಾಗದ ರೀತಿ ವೇತನ ತಾರತಮ್ಯವನ್ನು ಸರಿಪಡಿಸುವ ಸಲುವಾಗಿ ಸೂಕ್ತ ವೇತನ ಶ್ರೇಣಿ ನಿಗದಿಪಡಿಸುವ ಸಂಬಂಧ ನಿಯಮ 8ಕ್ಕೆ ತಿದ್ದುಪಡಿತರಲು ಸಮಿತಿಯು ಸಮಗ್ರ ವರದಿಯನ್ನು ಸಲ್ಲಿಸಿದ್ದ ಹಿನ್ನೆಲೆಯಲ್ಲಿ, ಸದರಿ ವಿಚಾರವನ್ನು ಸಚಿವ ಸಂಪುಟವು ದಿನಾಂಕ:14.06.2019ರಂದು ಅನುಮೋದನೆ ನೀಡಿರುತ್ತದೆ. ಅದರನ್ವಯ ನಿಯಮ 8ಕ್ಕೆ ಅಂತಿಮವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 54 ಮುಸೇವಿ 2017 ದಿನಾಂಕ:17.07.2019ರಲ್ಲಿ ತಿದ್ದುಪಡಿ ತರಲಾಗಿದೆ.<br><br>ಆದರೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2002ರ ನಿಯಮಗಳ ಪ್ರಕಾರ ದೇವಾಲಯದ ಆದಾಯದಲ್ಲಿ ಸಿಬ್ಬಂದಿ ವೆಚ್ಚವು ಶೇ.35 ರಷ್ಟು ಮೀರದಂತೆ ವೇತನ ಹಾಗೂ ಇನ್ನಿತರೇ ಸವಲತ್ತುಗಳನ್ನು ನೀಡಬೇಕಾಗಿರುತ್ತದೆ. |
| ಇ | ಯಾವ ಕಾಲಮಿತಿಯಲ್ಲಿ ಮಂಜೂರು ಮಾಡಲಾಗುವುದು? | |

| | | |
|---|---|---|
| | | ಈ ಹಿನ್ನೆಲೆಯಲ್ಲಿ ತಿದ್ದುಪಡಿ ನಿಯಮಾವಳಿಯನ್ವಯ ದೇವಾಲಯದ ನೌಕರರಿಗೆ ನಿಯಮ 8 ರಂತೆ 2568 ನೌಕರರುಗಳಿಗೆ ಪರಿಷ್ಕೃತ ವೇತನ ಶ್ರೇಣಿ ಅಳವಡಿಸಿ, ಆ ನಂತರ ಈಗಾಗಲೇ 5ನೇ ವೇತನ ಶ್ರೇಣಿ ಪಡೆದಿರುವ ಒಟ್ಟು 1111 ನೌಕರರುಗಳಿಗೆ ದೇವಾಲಯದ ಆದಾಯ ವೆಚ್ಚದ ಪೂರ್ಣವಾದ ಅಂಕಿ-ಅಂಶಗಳ ಮಾಹಿತಿಯನ್ನು ಸಂಬಂಧಪಟ್ಟ ದೇವಾಲಯಗಳಿಂದ ಪಡೆದು ಪೂರ್ಣ ಮಾಹಿತಿ ಪಡೆದು ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |

(ಸಂಖ್ಯೆ:ಕಂಇ 08 ಮುಸಪ್ರ 2020)

**(ಕೋಟ ಶ್ರೀನಿವಾಸ ಪೂಜಾರಿ)**
ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು